**ಸಾಕ್ಷಿಗೆ ದಿನಾಂಕಃ 09.12.2025 ರಂದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಎಂ.ಡಿ. ವಕೀಲರಿಂದಃ</u>**

1993 ರಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ನನಗೆ ಸಂಬಂಧಿಕರು. ನಿ.ಪಿ.1 ಕ್ಕೆ ಸಂಬಂಧಿಸಿದಂತೆ ನನ್ನ ಸಮಕ್ಷಮ ಆಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಯಾವ ರೀತಿ ಮಾತುಕತೆ ಆಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಕಛೇರಿಗೆ ವಾದಿ ಮತ್ತು ಪ್ರತಿವಾದಿ ಬಂದಿದ್ದರು. ಆಗ ಸಮಯ 3.30 ಗಂಟೆ ಆಗಿತ್ತು. ಪತ್ರ ಬರೆಯಲು ವಾದಿ ಮತ್ತು ಪ್ರತಿವಾದಿ ಮಾಹಿತಿಯನ್ನು ನೀಡಿದ್ದರು. ಆರ್.ಟಿ.ಸಿ.ಯನ್ನು ಇಬ್ಬರು ತೋರಿಸಿದ್ದರು ಮತ್ತು ಚೆಕ್ಕುಬಂದಿಯನ್ನು ಇಬ್ಬರು ಹೇಳಿದ್ದರು. ಆರ್.ಟಿ.ಸಿ.ಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಮಾತ್ರ ಇತ್ತು. ಆರ್.ಟಿ.ಸಿ.ಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದಿದ್ದರಿಂದ ಅದೇ ದಿನ ಕ್ರಯಪತ್ರ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸರ್ವೆ ನಕಾಶೆ ಮತ್ತು ಎಂ.ಆರ್.ದಾಖಲೆಗಳು ಕ್ರಯಮಾಡಲು ಅವಶ್ಯಕತೆ ಇರಲಿಲ್ಲ. ಸಾಮಾನ್ಯವಾಗಿ ಕ್ರಯಪತ್ರ ನೋಂದಣಿ ಮಾಡಿಸಲು 6 ತಿಂಗಳು ಅಥವಾ ಒಂದು ವರ್ಷ ಕಾಲಪರಿಮಿತಿಯನ್ನು ಕರಾರಿನಲ್ಲಿ ನಿಗದಿಪಡಿಸುತ್ತಾರೆ ಎಂದರೆ ಸಾಕ್ಷಿಯು ಇಬ್ಬರು ಪಕ್ಷಗಾರರು 3 ವರ್ಷ ನಿಗದಿ ಮಾಡಿ ಎಂದು ತಿಳಿಸಿದ್ದರು ಎಂದು ನುಡಿದಿರುತ್ತಾರೆ. ಇಬ್ಬರು ಪಕ್ಷಗಾರರು ದಾಖಲಾತಿ ಮತ್ತು ಹಣವನ್ನು ಹೊಂದಿಸಲು 3 ವರ್ಷ ಬೇಕು ಎಂದು ಕೇಳಿರುತ್ತಾರೆ.

ಆಧಾರ ಭೋಗ್ಯ ಮತ್ತು ಶುದ್ಧ ಭೋಗ್ಯ ಸುಮಾರು 10 ವರ್ಷದಿಂದ ನೋಂದಣಿ ಆಗುತ್ತಿಲ್ಲ ಎಂದರೆ ಸರಿ. ಸಾಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ನಾನು ಹಲವಾರು ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು ಸಾಲದ ವ್ಯವಹಾರಕ್ಕಾಗಿ 1 ನೇ ಪ್ರತಿವಾದಿಯು ಭದ್ರತೆಗಾಗಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಸಾಲದ ವ್ಯವಹಾರಕ್ಕೆ 3 ವರ್ಷ ಧೀರ್ಘ ಅವಧಿಯನ್ನು ಬರೆಯುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹೇಳಿಕೆಯ ಮೇರೆಗೆ ನಮೂದು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನಿ.ಪಿ.1 ನ್ನು ಸಾಲದ ಭದ್ರತೆಗಾಗಿ ಬರೆದಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಹಣ ಸಂದಾಯ ಆಗಿರುವುದಿಲ್ಲ. ವಾದಿಯ ಮಾತುಗಳನ್ನು ಕೇಳಿ ನಿ.ಪಿ.1 ನ್ನು ಕ್ರಯದ ಕರಾರು ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಿಡಬ್ಲ್ಯೂ -2 ಮತ್ತು ನಿ.ಪಿ.1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ನಂಜುಂಡಸ್ವಾಮಿ ನನಗೆ ಪರಿಚಯ. ಪಿಡಬ್ಲ್ಯೂ -2 ರವರು ನಮ್ಮ ಪಕ್ಕದ ಅಂಗಡಿಯವರು. ಸದರಿಯವರ ಅಂಗಡಿಯಲ್ಲಿ ಪತ್ರಗಳನ್ನು ಬೆರಳಚ್ಚು ಮಾಡಿಸಿರುತ್ತೇನೆ ಎಂದರೆ ಸರಿ. ನಿ.ಪಿ.1 ನ್ನು ಪಿಡಬ್ಲ್ಯೂ -2 ರವರ ಅಂಗಡಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಂಜುಂಡಸ್ವಾಮಿ ರವರು ತಾಲ್ಲೂಕು ಕಛೇರಿಯಲ್ಲಿ ಪತ್ರಬರಹಗಾರರಾಗಿ ಇರುತ್ತಾರೆ ಎಂದರೆ ಸರಿ. ಪಿಡಬ್ಲ್ಯೂ -2 ಮತ್ತು ನಂಜುಂಡಸ್ವಾಮಿ ರವರನ್ನು ಸಾಕ್ಷಿದಾರರನ್ನಾಗಿ ನಾನೇ ಕರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರನ್ನು ನಿ.ಪಿ.1 ಕ್ಕೆ ನಾನೇ ಕರೆಯಿಸಿ ಸಹಿ ಪಡೆದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದಿಂದ ನನಗೆ ನೋಟಿಸು ಬಂದಿರುವುದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ವಾದಿಯ ವಕೀಲರು ತಯಾರಿಸಿರುತ್ತಾರೆ. ನಿ.ಪಿ.1 ನ್ನು ಭದ್ರತೆಗಾಗಿ ಬರೆದುಕೊಟ್ಟಿದ್ದರೂ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**